# ಯಜ್ಞ ಯಾಗ- ಮಾಟ ಮಂತ್ರ

ಮಾಟ ಮಂತ್ರ ಮಾಡುವ ಮತ್ತು ಮಾಡಿಸುವ ಪದ್ಧತಿ ನಾಗರಿಕ ಪೂರ್ವ ಪದ್ಧತಿಯಾಗಿದೆ. ಅತೀತ ಶಕ್ತಿಗಳ ಬಗ್ಗೆ ಪ್ರಬಲವಾದ ನಂಬಿಕೆ ಜಾಗೃತವಾದ ನಂತರ ಆ ಶಕ್ತಿಗಳನ್ನು ಒಲಿಸಿಕೊಂಡು ತನ್ನ ಕೆಲಸ ಸಾಧಿಸಿಕೊಳ್ಳುವ ಮನುಷ್ಯನ ಆಕಾಂಕ್ಷೆಯೇ ಇಂಥ ಪದ್ಧತಿಗಳ ಉಗಮಕ್ಕೆ ಕಾರಣವಿರಬೇಕು. ಈ ಅತೀತ ಶಕ್ತಿಗಳು ಪ್ರಾರಂಭದಲ್ಲಿ ಪ್ರಕೃತಿಯ ಅನುಭವ ಗೋಚರ ಸ್ವರೂಪಗಳಾದ ಕತ್ತಲು ಬೆಳಕು- ಗಾಳಿ ಬೆಂಕಿ- ನೀರು ಪರ್ವತ ಶ್ರೇಣಿ- ಸೂರ್ಯಚಂದ್ರ- ಇಂಥವೇ ಆಗಿದ್ದವು. ಅನಂತರದ ದಿನಮಾನಗಳಲ್ಲಿ ಪ್ರಕೃತಿಯ ವಿಸ್ಮಯ ಸೃಷ್ಟಿಗಳಾದ ಹೂ ಹಣ್ಣು, ಪ್ರಾಣಿ ಪಕ್ಷಿಗಳ ಜನನವೇ ಮುಂತಾದವು ಅತೀತ ಶಕ್ತಿಯ ಕರುಣೆಯ ಫಲವೆಂಬ ನಂಬಿಕೆಯನ್ನು ರೂಢಿಸಿಕೊಳ್ಳಲಾಯಿತು. ಇಲ್ಲಿಯವರೆಗೆ ಈ ಅತೀತ ಶಕ್ತಿಯ ನಂಬಿಕೆಯ ಬಗ್ಗೆ ಭಯವಾಗಲೀ ಹೆದರಿಕೆಯಾಗಲೀ ಇದ್ದಂತೆ ತೋರುವುದಿಲ್ಲ.

ಆದರೆ ಮನುಷ್ಯ ಸತ್ತನಂತರ ಏನಾಗುತ್ತಾನೆ? ಅವನ ಉಸಿರು ಆತ್ಮ ಎಲ್ಲಿಗೆ ಹೋಗುತ್ತದೆ ಎಂಬ ಚಿಂತನೆ ಆರಂಭವಾದ ನಂತರ ಈ ಲೋಕಕ್ಕಿಂತ ಭಿನ್ನವಾದ ಮತ್ತೊಂದು ಲೋಕವಿದೆಯೆಂದೂ, ಅಲ್ಲಿಗೆ ಈ ಆತ್ಮ ಪಯಣಿಸುತ್ತದೆ ಯೆಂದೂ, ಅಲ್ಲಿ ಮನುಷ್ಯರನ್ನು ಆಳುವ- ನಿಯಂತ್ರಿಸುವ ಶಕ್ತಿ ರೂಪಗಳಿವೆ ಯೆಂದೂ, ಅವು ಭೂಮಿ ಮತ್ತು ಅಲ್ಲಿನ ಸಕಲೆಂಟು ಜೀವರಾಶಿಯನ್ನು ನಿಯಂತ್ರಿಸಿ ನಡೆಸುತ್ತವೆಯೆಂಬ ಕಲ್ಪನೆ-ನಂಬಿಕೆ ಆರಂಭಗೊಂಡಿತು. ಇಂಥ ಪರಲೋಕ ಶಕ್ತಿಗಳನ್ನು- ಅಲ್ಲಿಗೆ ಹೋಗುವ ಆತ್ಮಗಳನ್ನು ತಮಗನುಕೂಲವಾಗಿ ಪರಿವರ್ತಿಸಿಕೊಂಡು ತಮ್ಮ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳುವ ಪ್ರವೃತ್ತಿ ಪ್ರಾರಂಭವಾಯಿತು. ಈ ಕ್ರಿಯೆಗಳನ್ನೇ ಮಾಟ ಮಂತ್ರಗಳೆರಡೂ ಮಾಂತ್ರಿಕ ಶಕ್ತಿಯೆಂದೂ ಕರೆಯಲಾಯಿತು. ಈ ಕ್ರಿಯೆಗಳನ್ನು ನಡೆಸುವ ವ್ಯಕ್ತಿ ಮಂತ್ರವಾದಿಯೆಂದೂ ಮಾಟಗಾರನೆಂದೂ ಕರೆಸಿಕೊಂಡು ಸಮುದಾಯದಲ್ಲಿ ನಿಗೂಢ ವ್ಯಕ್ತಿಯಾಗಿ, ಶಕ್ತಿಗಳು ಮತ್ತು ಮನುಷ್ಯರ ನಡುವೆ ಸಂವಹನ ಕ್ರಿಯೆ ಜಾಗೃತಗೊಳಿಸುವ ಶಕ್ತಿವಂತನೆಂದು ಮಾನ್ಯನಾದನು.

ಈ ಅತೀತ ಶಕ್ತಿಗಳೆಂದು ಪರಿಭಾವಿಸಿದ ನಂತರದ ಕಾಲದಲ್ಲಿ ಅವುಗಳನ್ನು ಒಲಿಸಿಕೊಳ್ಳುವ ಕ್ರಿಯಾ ವಿಧಾನಗಳಲ್ಲಿ ಸಾತ್ವಿಕ ರೂಪವೆಂದು- ತಾಮಸ ರೂಪವೆಂದು ಎರಡು ಕವಲುಗಳಾಗಿ ಹೊರ ಹೊಮ್ಮಿವೆ. ಸಾತ್ವಿಕ ರೂಪದ ಕ್ರಿಯೆಗಳನ್ನು ಯಜ್ಞಯಾಗಗಳೆಂದೂ ಅವನ್ನು ನಡೆಸಿಕೊಡುವವರು ಬ್ರಾಹ್ಮಣ ವರ್ಗದ ಯಜ್ಞಪಿತೃಗಳೆಂತಲೂ, ತಾಮಸ ರೂಪದ ಕ್ರಿಯೆಗಳನ್ನು ಮಾಟ ಮಂತ್ರಗಳೆಂದೂ ಅವನ್ನು ನಡೆಸಿಕೊಡುವವರು ಮಂತ್ರವಾದಿಗಳೆಂದೂ ಕರೆಸಿಕೊಂಡರು. ಈ ಮಂತ್ರವಾದಿಗಳು ಸಾಮಾನ್ಯವಾಗಿ ಕೆಳವರ್ಗದವರೂ ಜಾತಿಯವರೂ ಆಗಿರುವುದು ಮುಖ್ಯ. ಈ ಎರಡು ಕ್ರಿಯೆಗಳಲ್ಲೂ ಅತೀತ ಶಕ್ತಿಗಳನ್ನು ಒಲಿಸಿಕೊಳ್ಳುವುದೇ ಮುಖ್ಯ ಗುರಿ. ಆ ಗುರಿ ಸಾಧನೆಗೆ ಈ ಶಕ್ತಿಗಳಿಗೆ ಪ್ರಕೃತಿ ಜನ್ಯವಾದ ನಾನಾ ಜೀವಿಗಳನ್ನು (ಸಸ್ಯ-ಪ್ರಾಣಿಗಳ ಜೊತೆ-ಅವುಗಳ ಜನ್ಯ) ಬಲಿ ಕೊಡುವ ಪದ್ಧತಿ ರೂಢಿಗೆ ಬಂತು. ಮಂತ್ರವಾದಿ ತಾಮಸ ರೂಪದ ಆಚರಣೆ ನಡೆಸಿದರೆ, ಯಜ್ಞಪಿತೃ ಸಾತ್ವಿಕ ರೂಪದ ಸಸ್ಯ ಮತ್ತು ಸಸ್ಯ ಪ್ರಾಣಿಜನ್ಯ ವಸ್ತುಗಳನ್ನು ಬಲಿಕೊಡುತ್ತಾನೆ. (ಆರಂಭದಲ್ಲಿ ಪ್ರಾಣಿಗಳನ್ನೂ ಸಾತ್ವಿಕರೆಂದು ಕರೆಸಿಕೊಳ್ಳುವವರು ಬಲಿ ಕೊಡುತ್ತಿದ್ದರೆಂಬುದನ್ನು ಮರೆಯಬಾರದು.) ಮಾಟ ಮಂತ್ರಗಳನ್ನು ಸಾಮಾನ್ಯವಾಗಿ ಕತ್ತಲ ಕ್ರಿಯೆಗಳನ್ನಾಗಿ ನೆರವೇರಿಸಲಾಗುತ್ತದೆ.

ಈ ಮಾಟ ಮಂತ್ರಗಳು ಸಂಪೂರ್ಣ ನಂಬಿಕೆಯಾಧಾರಿತ ಕ್ರಿಯೆಗಳು. ಸಮಾಜದಲ್ಲಿ ಮೌಢ್ಯ ತುಂಬಿದ್ದಾಗ, ವೈಚಾರಿಕ-ವೈಜ್ಞಾನಿಕ ಜಾಗೃತಿ ಮೂಡ ದಿದ್ದಾಗ ಅವು ಆಳ್ವಿಕೆ ನಡೆಸಿದ್ದೂ ನಿಜ. ಶತಮಾನಗಳುದ್ದಕ್ಕೂ ವೈಚಾರಿಕ ಮನಸ್ಸು ಇಂಥ ಕ್ರಿಯೆಗಳನ್ನು ವಿರೋಧಿಸುತ್ತಲೇ ಬಂದಿದೆ. ನಮ್ಮ ವಚನಕಾರ ರಂತು ಇಂಥ ಕ್ರಿಯೆಗಳನ್ನು ತೀಕ್ಷ್ಣವಾಗಿ ವಿಡಂಬಿಸಿದ್ದಾರೆ. ಆದರೆ ಇಂದು ವಿಜ್ಞಾನ ಮತ್ತು ವೈಚಾರಿಕ ಅರಿವುಗಳು ವಿಸ್ತರಿಸಿವೆ; ನಮ್ಮ ಶೋಧಗಳು ನಮ್ಮ ಅರಿವನ್ನು ವಿಜ್ಞಾನದ ಬೆಳಕಲ್ಲಿ ವಿಕಾಸಗೊಳಿಸಿ ಅತೀತ ಶಕ್ತಿ ಮತ್ತು ಪರಲೋಕ ಗಳ ಬಗ್ಗೆ ಸ್ಪಷ್ಟ ಜ್ಞಾನವನ್ನು ನೀಡುತ್ತಿವೆ. ದುಷ್ಟ ಶಕ್ತಿಗಳು ಅಥವಾ ಶಿಷ್ಟ ಶಕ್ತಿ ಗಳು ನಮ್ಮ ಅಜ್ಞಾನದ ಸೃಷ್ಟಿಗಳು. ಆ ಬಗೆಗಿನ ಸಾಹಿತ್ಯ ಕಲ್ಪನೆಯ ಸೃಷ್ಟಿ; ನಮ್ಮ ಧೀಶಕ್ತಿಯ ಅಲ್ಪತೆಯನ್ನು ತೃಪ್ತಿಪಡಿಸಿಕೊಳ್ಳಲು ಮಾಡಿಕೊಂಡಿರುವ ವ್ಯವಸ್ಥೆ.

ಅಧುನಿಕ ಶಿಕ್ಷಣ ಭಾರತೀಯ ಬದುಕನ್ನು ಪ್ರವೇಶಿಸಿದ ನಂತರ, ಉದಾರ ವಾದೀ ಗಾಳಿ ಬೀಸಿ, ಹೊಸ ಆಲೋಚನಾ ಕ್ರಮ, ವೈಜ್ಞಾನಿಕ ಮನೋಧರ್ಮ ಪಸರಿಸಿ ಇಂಥ ಮೌಢ್ಯ ಪದ್ಧತಿಗಳು ಕಡಿಮೆಯಾಗಿದ್ದವು. ಆದರೆ ಇಂದು ಜಗತ್ತಿನಾದ್ಯಂತ ಮತ್ತೆ ಪಿಡುಗಾಗಿ ಹರಡುತ್ತಿರುವ ಮೂಲಭೂತವಾದದ ಪೂರಕ ವಿಧಾನಗಳಾಗಿ ಯಜ್ಞ ಯಾಗ- ಮಾಟ ಮಂತ್ರವಾದಿಗಳು ಅಧಿಕವಾಗುತ್ತಿರುವುದು ಮತ್ತು ಮೂಲಭೂತವಾದಿ ತತ್ವ-ನಂಬಿಕೆಗಳನ್ನೇ ಬಂಡವಾಳವನ್ನಾಗಿ ಮಾಡಿಕೊಂಡಿರುವ ರಾಜಕಾರಣಿಗಳು ಇಂಥವುಗಳನ್ನು ಆಚರಿಸಿ ಪ್ರೋತ್ಸಾಹಿಸಿ ಸಾಮಾನ್ಯರಿಗೆ ಮಾದರಿಯಾಗುತ್ತಿರುವುದು ಆತಂಕವನ್ನುಂಟು ಮಾಡುತ್ತಿದೆ.

■ **ಶಿಕಾಕು**

## ಮಾತೇ ಮುತ್ತು

★ ಗಂಡ ಹೆಂಡತಿಯನ್ನು, ಹೆಂಡತಿ ಗಂಡನನ್ನು ಪರಸ್ಪರ ಗೌರವದಿಂದ ಕಾಣಬೇಕು. ತನ್ನ ಗಂಡನ ದೌರ್ಬಲ್ಯಗಳನ್ನು ಮಕ್ಕಳ ಮುಂದೆ ಹಂಚಿಕೊಳ್ಳದೆ, ಅವನ ಸಾಧನೆ, ದೊಡ್ಡತನಗಳನ್ನು ಮಾತ್ರ ಹಂಚಿಕೊಂಡರೆ ಮಕ್ಕಳು ದಾರಿ ತಪ್ಪುವುದಿಲ್ಲ. ಹಾಗೆಯೇ, ಪತ್ನಿಯ ಬಗ್ಗೆ ಗೌರವ ಇಟ್ಟುಕೊಂಡವನ ಕುಟುಂಬದಲ್ಲಿ ಪ್ರೀತಿ ನಲಿದಾಡುತ್ತದೆ.

-ಅನುಭವಾಮೃತ

★ ಪರಸ್ಪರ ಸಹಕಾರ ನೀಡುವುದರಿಂದ ಮಾನವ ಸಮಾಜ ಸುಖದಿಂದ ಮುನ್ನಡೆಯಲು ಸಾಧ್ಯ.

-ವೀರೇಂದ್ರ ಹೆಗ್ಗಡೆ

★ ಹೆಂಡತಿ ಮಾತ್ರ ತಗ್ಗಿ ಬಗ್ಗಿ ನಡೆಯುವುದಲ್ಲ, ಗಂಡನೂ ಹೆಂಡತಿಯನ್ನು ಆದರಿಸಬೇಕು, ಗೌರವಿಸಬೇಕು.

-ಸಂಚಿ ಹೊನ್ನಮ್ಮ

★ ಪ್ರೇಮವು ಎಲ್ಲವನ್ನೂ ಜಯಿಸುತ್ತದೆ; ನಾವೂ ಪ್ರೇಮಕ್ಕೆ ಶರಣಾಗೋಣ.

-ವರ್ಜಿಲ್

★ ದೇವರು ಸಹ ಪ್ರೇಮಿಸಿದಾಗ ಬುದ್ಧಿವಂತನಾಗಿಯೇ ಇರಲಾರ!

-ಪಿ.ಸೈರಸ್

★ ಪ್ರೇಮದ ಹೆಸರಿನಲ್ಲಿ ಏನಾದರೂ ಮಾಡಬೇಕೆಂದು ಯಾರನ್ನೂ ಬಲಾತ್ಕರಿಸಬೇಡಿ, ಪ್ರೇಮ ವ್ಯಾಪಾರದ ವಸ್ತುವಲ್ಲ.

-ಲಿಯೋ ಬುಸ್ಕಾಗ್ಲಿಯೋ

★ ನಿನ್ನೆಗಿಂತ ಹೆಚ್ಚು ಪ್ರೇಮಿಸುತ್ತೇನೆ; ನಾಳೆಗಿಂತ ಕಡಿಮೆ ಪ್ರೀತಿಸುತ್ತೇನೆ.

-ಎಡ್ಮಂಡ್ ರೋಸ್ಟಾಂಡ್

★ ಊನಹೊಂದಿ ಸೋಲೊಪ್ಪುವ ಯುವಕ ಯಾರು ಎಂದರೆ ಮದುವೆಯಾದವನು!

-ಶೇಕ್ಸ್‌ಪಿಯರ್

★ ಮಾಡುವವನದಲ್ಲ ಹಾಡು; ಹಾಡುವವನದು.

-ಪು.ತಿ.ನ.

★ ಅನ್ಯಾಯ, ಶೋಷಣೆಗೆ ಒಳಗಾದ ಶೂದ್ರರಿಗೆ ಕೋಪ ಜಾಸ್ತಿ. ಅನ್ಯಾಯಕ್ಕೆ ಒಳಗಾಗದವರಿಗೆ ಕೋಪ ಬರುವುದಿಲ್ಲ.

-ಸಿದ್ದರಾಮಯ್ಯ

★ ನಿಮ್ಮ ಹಿಂದೆ ನಿಂತು ಮಾತನಾಡುವವರ ಬಗ್ಗೆ ಚಿಂತೆ ಮಾಡಬೇಡಿ. ನೀವು ಅವರಿಗಿಂತ ಒಂದು ಹೆಜ್ಜೆ ಮುಂದೆ ಇದ್ದೀರಿ ಅಂತ ಹೆಮ್ಮೆಪಡಿ.

-ಅಲೆಕ್ಸಾಂಡರ್

★ ಯಶಸ್ಸು ನದಿಯಂತೆ. ಪೊಳ್ಳನ್ನು ತೇಲಿಸುತ್ತದೆ, ಭಾರವನ್ನು ಮುಳುಗಿಸುತ್ತದೆ.

-ಫ್ರಾನ್ಸಿಸ್ ಬೇಕನ್

★ ಎನ್ನ ಪಾಡೆನಗಿರಲಿ, ಅದರ ಹಾಡನ್ನಷ್ಟೆ ನೀಡುವೆನು ರಸಿಕ ನಿನಗೆ.

-ದ.ರಾ.ಬೇಂದ್ರೆ

★ ತ್ಯಾಗ ಬುದ್ಧಿ ಇದ್ದವರು ಕೆಡುವುದಿಲ್ಲ; ಕೆಡುವ ಜನರಿಗೆ ತ್ಯಾಗ ಬುದ್ಧಿ ಇರುವುದಿಲ್ಲ.

-ಅವ್ಯಕ್ತ